## ನಕ್ಕುಬಿಡಿ



### ಏನಿತ್ತು?

ಮಾರ್ಕೆಟ್ಟಿಗೆ ಹೋಗಿ ಬಂದ ಮನೆಯಾಕೆ ಕೆಲಸದವಳ ಮೇಲೆ ರೇಗಿದಳು:

'ನಾಳೆಯಿಂದ ನೀನು ಕೆಲಸಕ್ಕೆ ಬರಬೇಡ ತಿಳೀತಾ'

'ಯಾಕಮ್ಮಾ, ಏನಾಯ್ತು?' ಗಾಬರಿಯಿಂದ ಕೆಲಸದಾಕೆ ಕೇಳಿದಳು.

'ನಾನು ಹೋಗುವಾಗ ನಿನ್ನ ಕೈಲಿ ಆರು ಬಳೆಗಳಿದ್ದು, ಈಗ ನೋಡಿದ್ರೆ ಎರಡೇ ಇವೆಯಲ್ಲ'

'ಕೆಲಸ ಮಾಡೋವಾಗ ಒಡೆದ್ವು'

'ನಿನ್ನ ಕೆಲಸ ಮಂಚದ ಮೇಲೆ ಏನಿತ್ತು?'

★★★

### ಎಷ್ಟು ಹುಡುಗರೂಂತ

ತಿಮ್ಮ: ನನ್ನ ಹುಡುಗಿ ಇತ್ತಿತ್ತಲಾಗಿ ನನ್ನತ್ತ ತಿರುಗಿಯೂ ನೋಡುವುದಿಲ್ಲ.

ಈತ: ಏನು ಮಾಡೋದು? ಅವಳೂ ಪಾಪ ಎಷ್ಟು ಹುಡುಗರೂಂತ ನೋಡೋಕಾಗುತ್ತೆ?

★★★

### ಸಾಯುವುದಿಲ್ಲ!

ತಿಮ್ಮ: ನಿಮ್ಮ ಅಂಗಡಿಯಲ್ಲಿ ಜಿರಳೆ ಸಾಯಿಸುವ ಔಷಧಿ ಇದೆಯೇ?

ಅಂಗಡಿಕಾರ: ಇದೆ. ಎಷ್ಟು ಕೊಡಲಿ?

ತಿಮ್ಮ: ಆದ್ರೆ, ಜಿರಳೆ ಕೊಂದ ಪಾಪ ಯಾರಿಗೆ ಬರುತ್ತೆ. ನಿಮಗೋ, ನನಗೋ?

ಅಂಗಡಿಕಾರ: ಯಾರಿಗೂ ಬರೋದಿಲ್ಲ. ಜಿರಳೆ ಸತ್ತರೆ ತಾನೆ? ಬರೋದು!

(ಸಂಗ್ರಹ) ಪ್ರಕಾಶ ಎಸ್.ಮನ್ನಂಗಿ



### ವ್ಯತ್ಯಾಸ

ಸಂದರ್ಶಕ: ನಿಮಗೂ ವಿದೇಶಿ ಕ್ರಿಕೆಟ್ ಆಟಗಾರರಿಗೂ ಏನು ವ್ಯತ್ಯಾಸ?

ಕ್ರಿಕೆಟ್ ಆಟಗಾರ: ಭಾರೀ ವ್ಯತ್ಯಾಸವಿದೆ. ಅವರಲ್ಲಿ ಒಗ್ಗಟ್ಟಿಲ್ಲ. ಒಬ್ಬೊಬ್ಬ ಆಟಗಾರ ಒಂದೊಂದು ಶತಕ ಬಾರಿಸುತ್ತಾರೆ. ಆದರೆ ನಮ್ಮ ಆಟಗಾರರಲ್ಲಿ ಒಗ್ಗಟ್ಟು. ಎಲ್ಲಾ ಆಟಗಾರರು ಸೇರಿ ಒಂದು ಶತಕ ಬಾರಿಸುತ್ತೇವೆ.

★★★

### ಏಟಿಎಂ

ದಿನಾ ಏ.ಟಿ.ಎಂ.ಗೆ ಹೋಗ್ತೀರಲ್ಲ 'ಏನು ಭಾರೀ ದುಡ್ಡು ಇಟ್ಟಿದ್ದೀರಾ?

ಏ.ಟಿ.ಎಂ.ಗೆ ಹೋಗೋದು ದುಡ್ಡಿಗಾಗಿ ಅಲ್ಲ. ಅಲ್ಲಿ ಬೂತ್ ಒಳಗೆ ಏಸಿ ಹಾಕಿರ್ತಾರಲ್ಲ. ಹಾಗಾಗಿ ದಿನಾ ಒಂದೈದು ನಿಮಿಷ ಅಲ್ಲಿ ಕುಳಿತು ಬರುತ್ತೇನೆ ಅಷ್ಟೆ!

★★★

### ಜಾತಕ

ಜ್ಯೋತಿಷಿ: ಈ ಜನ್ಮದಲ್ಲಿ ನಿಮಗೆ ಹೆಣ್ಣು ಸಿಗೋದಿಲ್ಲ!

ಗಿರಾಕಿ: ಯಾಕೆ?

ಜ್ಯೋತಿಷಿ: ನಿಮ್ಮ ಜಾತಕದಲ್ಲಿ ಶೌಚಾಲಯದ ಕೊರತೆ ಇದೆ.

-ದೇವಿದಾಸ ಸುವರ್ಣ, ಅಂಕೋಲಾ


ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ



ಪಂಡಿತ
ಶ್ರೀ ಎಂ. ಬಿ. ಜೋಶಿ
ಪ್ರಸಿದ್ಧ ಜ್ಯೋತಿಷ್ಯರು
ಶ್ರೀ ರಾಘವೇಂದ್ರ ಸ್ವಾಮಿ ಉಪಾಸಕರು
ಶ್ರೀ ಚೌಡೇಶ್ವರಿದೇವಿ ಆರಾಧಕರು
9611002265

ಹಸ್ತ ರೇಖೆ, ಮುಖ ಲಕ್ಷಣ ಮತ್ತು ಭಾವಚಿತ್ರದ ಮೇಲೆ ನಿಮ್ಮ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ. ವಿದ್ಯೆ, ಪರೀಕ್ಷೆ, ಉದ್ಯೋಗ, ಪ್ರಮೋಶನ್, ವಿದೇಶ ಪ್ರವಾಸ, ಪ್ರೇಮ ಪ್ರಕರಣ ಸಂತಾನ ಪ್ರಾಪ್ತಿ, ಸಾಲ ಮುಕ್ತಿ, ರೋಗಗಳು ಲಕ್ಷ್ಮೀ ಯೋಗ, ಭಾಗ್ಯೋದಯ, ಸ್ತ್ರೀವಶೀಕರಣ, ಪುರುಷ ವಶೀಕರಣ ಮಾಟ-ಮಂತ್ರ ನಿವಾರಣೆ, ಮದುವೆ, ಅಡ-ತಡೆ, ನ್ಯಾಯಾಲಯ ಪ್ರಕರಣಗಳು, ವಿವಾಹ ವಿಚ್ಛೇದನ ಮುಂತಾದ

ಇನ್ನೂ ಅತೀ ಜಟಿಲ ಸಮಸ್ಯೆಗಳಿಗೆ ಅತೀ ಶೀಘ್ರ ಪರಿಹಾರ ಮಾಡುತ್ತಾರೆ.

ಅನೇಕ ರಾಜಕೀಯ ಗಣ್ಯರು, ಉದ್ಯಮಿಗಳು, ನೌಕರಸ್ಥರು, ಜೋಶಿಯವರಿಂದ ಲಾಭ ಪಡೆದಿರುತ್ತಾರೆ.

ನೀವು ಹಲವಾರು ಜ್ಯೋತಿಷ್ಯರನ್ನು ಕೇಳಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದೆ ನೊಂದಿದ್ದರೆ ಅಂತಹ ಯಾವುದೇ ಕಠಿಣ ಸಮಸ್ಯೆಗಳಿದ್ದರು ಪರಿಹಾರ ಶತಸಿದ್ಧ.

ನಿಮ್ಮ ಸಮಸ್ಯಗಳನ್ನು ಗುಪ್ತವಾಗಿ ಇಡಲಾಗುವುದು.

ಆಫೀಸ : ಧಮ್ಮಣಗಿ ಪ್ರೆಸ್ಟೀಜ್ ಪ್ಲಾಜಾ ಎಫ್ 13, ಹೋಟೆಲ ಆಯೋಧ್ಯ ಪಕ್ಕದಲ್ಲಿ, ಹಳೇ ಬಸ್‌ಸ್ಟ್ಯಾಂಡ್ ಎದುರು, ಹುಬ್ಬಳ್ಳಿ.

ಮನೆ : ಶ್ರೀ ಶ್ರೀನಿವಾಸ ಅನುಗ್ರಹ ಪಿ.ಎನ್.ಟಿ. ಕಾಲನಿ, ಹೇಮಂತನಗರ, ಕೇಶ್ವಾಪುರ, ಹುಬ್ಬಳ್ಳಿ-23.

0836-2282265
E-mail: mbjoshiastro@gmail.com